ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 65-68
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ತ್ರಿವೇಣಿ ಅವರ 'ಅವಳ ಮನೆ' ಕಾದಂಬರಿಯಲ್ಲಿ ಸರೋಜಿನಿಯ ಕನಸು

**ಖೈರುನ್ನಿಸಾ ಬೇಗಂ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಕಲಬುರುಗಿ

***Abstract:***
*ಕನ್ನಡ ಸಾಹಿತ್ಯದಲ್ಲಿ ಹಲವು ಪ್ರಕಾರಗಳು ಹುಟ್ಟಿಕೊಂಡಿದ್ದು, ನವೋದಯ ಕಾಲಘಟ್ಟದ ಸಂದರ್ಭದಲ್ಲಿ ಕಾದಂಬರಿ ಪ್ರಕಾರದ ಬೆಳವಣಿಗೆಯು ಮಹತ್ವವಾದುದು ಆಗಿದೆ. ನವೋದಯದ ಪೂರ್ವಕಾಲಘಟ್ಟದಲ್ಲಿ ಮತ್ತು ನಂತರ ಪ್ರಬುದ್ಧ ಕಾದಂಬರಿಗಳು ರಚಿತವಾಗಿವೆ. ತ್ರಿವೇಣಿ ಅವರು ಬರೆದಿರುವ 'ಅವಳ ಮನೆ' ಕಾದಂಬರಿಯಲ್ಲಿ ಬರುವ ಸರೋಜಿನಿ ಅವಳ ಮನೆಯು ಅಲ್ಲದೇ ಪರರ ಮನೆಯನ್ನು ತನ್ನ ಮನೆಯೆಂಬ ಭ್ರಮೆಯಿಂದ ಹೊರಗೆ ಬಂದು ಹೊಸ ಸಂಬಂಧವನ್ನು ಕಟ್ಟಿಕೊಳ್ಳುವ ಸನ್ನಿವೇಶವನ್ನು ಕಾದಂಬರಿ ವಿವರಿಸುತ್ತದೆ.*

***Keywords:*** *ಕನ್ನಡ ಸಾಹಿತ್ಯ, ತ್ರಿವೇಣಿ, ಅವಳ ಮನೆ, ಸರೋಜಿನಿಯ ಕನಸು.*

## ಪೀಠಿಕೆ

ತ್ರಿವೇಣಿ ಅವರು 1928 ಸೆಪ್ಟಂಬರ್ 1 ರಂದು ಮಂಡ್ಯದಲ್ಲಿ ಜನಿಸಿದರು. ಇವರು ಕಾದಂಬರಿ ಮತ್ತು ಕತೆಗಳನ್ನು ಬರೆದಿದ್ದಾರೆ. 'ಅವಳ ಮನೆ' ಕಾದಂಬರಿಯು ಸರೋಜಿನಿ ಅನುಭವಿಸುವ ಯಾತನೆಗಳನ್ನು ಅನಾವರಣಗೊಳಿಸುತ್ತದೆ. ದತ್ತು ಪುತ್ರಿಯಾಗಿ ಹಂಗಿನ ಅರಮನೆಗೆ ಸೇರಿದ ಅವಳು ಹೆತ್ತವರಿಂದ ದೂರವಾಗಿ ಅವರ ನೆನಪಿನಲ್ಲಿ ದುಃಖಿಸುವಳು. ಅವಳಿಂದ ಏನನ್ನು ನಿರೀಕ್ಷೆ ಮಾಡುತ್ತಿದ್ದರು ಅದು ಪೋಷಕರಿಗೆ ಸಿಗದಿದ್ದಾಗ ಅವಳನ್ನೇ ತಿರಸ್ಕಾರ ಮನೋಭಾವದಿಂದ ನೋಡಿ ಸರೋಜಿನಿಯನ್ನು ಮರೆಯುತ್ತಾರೆ. ತನ್ನವರ ನೆನಪು ಆಗುತ್ತಿರುವಾಗಲೇ ತಾಯಿ ನಿಂದಿಸಿದ ಮಾತುಗಳು ನೆನಪಾಗಿ ಮನಸ್ಸಿಗೆ ಚುಚ್ಚುತ್ತದೆ. ಅವಳಿಗೆ ತಿಳುವಳಿಕೆ ಬಂದ ಮೇಲೆ ತನ್ನದಲ್ಲದ ಮನೆಯನ್ನು ಬಿಟ್ಟು ಸ್ವತಂತ್ರವಾಗಿ ಜೀವಿಸಬೇಕೆಂಬ ಆಸೆಯನ್ನು ಹೊಂದಿರುವಳು. ಸಾಕಿದ ಪೋಷಕರ ನೆನಪು, ಹೆತ್ತವರ ನೆನಪು, ಅಕ್ಕ-ತಮ್ಮಂದಿರ ನೆನಪು ಮಾಡಿಕೊಳ್ಳುವ ಸಂದರ್ಭವನ್ನು ವಿವರಿಸುತ್ತದೆ.

ಕೂಡುಕುಟುಂಬದಿಂದ ದೂರವಾದ ಸರೋಜಿನಿಗೆ ತಾಯ್ತಂದೆ, ಅಕ್ಕಂದಿರ, ತಮ್ಮನ ನೆನಪು ಸದಾ ಕಾಡುತ್ತಲಿತ್ತು ಆದರೆ ಅವಳ ಮನಸ್ಸಿನಲ್ಲಾಗುವ ತಲ್ಲಣಗಳನ್ನು ಯಾರೊಂದಿಗೂ ಹಂಚಿಕೊಳ್ಳಲು ಆಸ್ಪದವೇ ಇರಲಿಲ್ಲ. ಮಗಳಿಂದ ಹಣದ ಆಪೇಕ್ಷೆ ಮಾಡುವ ಹೆತ್ತವರಿಗೆ ಅವಳ ಮನಃಸ್ಥಿತಿ ಅರ್ಥವಾಗುವುದಿಲ್ಲ. ಪರರ ಮಗಳು ನಮ್ಮ ಮಗಳು ಆಗುವುದಿಲ್ಲ ಎಂಬ ರಾಮಸ್ವಾಮಯ್ಯನವರ ಮನೋಧೋರಣೆ ಬದಲಾಗುವುದಿಲ್ಲ. ಗಂಡ-ಹೆಂಡತಿ ನಡುವೆ ಕೂಸು ಬಡವಾದಂತೆ ಸರೋಜಿನಿ ಮಾನಸಿಕವಾಗಿ ಖಿನ್ನತೆಗೆ ಒಳಗಾಗುತ್ತಾಳೆ. ಸುಬ್ಬಣ್ಣ ಮತ್ತು ಭಾಗ್ಯಮ್ಮ ದಂಪತಿಗಳಿಗೆ ಏಳು ಜನ ಮಕ್ಕಳಿರುತ್ತಾರೆ. ಮಕ್ಕಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು

***Please cite this article as:*** ಖೈರುನ್ನಿಸಾ ಬೇಗಂ. (2026). ತ್ರಿವೇಣಿ ಅವರ 'ಅವಳ ಮನೆ' ಕಾದಂಬರಿಯಲ್ಲಿ ಸರೋಜಿನಿಯ ಕನಸು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 65–68

ಕಷ್ಟಪಡುತ್ತಿರುವ ದಂಪತಿಗಳಿಗೆ ತಮ್ಮ ಮಕ್ಕಳಲ್ಲಿ ಒಬ್ಬರನ್ನು ನಾಗಮ್ಮ ಮತ್ತು ರಾಮಸ್ವಾಮಯ್ಯ ದಂಪತಿಗಳಿಗೆ ದತ್ತುಕೊಡುವ ನಿರ್ಧಾರ ಮಾಡುತ್ತಾರೆ. ಅದರಂತೆಯೇ ಸರೋಜಿನಿ ಅವರ ದತ್ತು ಮಗಳಾಗಿ ಮೈಸೂರನ್ನು ಸೇರುತ್ತಾಳೆ. ಅವಳಿಂದ ತಮ್ಮ ಕುಟುಂಬಕ್ಕೆ ಸಹಾಯವಾಗುತ್ತದೆಂದು ಅವಳ ಹೆತ್ತವರು ಭಾವಿಸಿದ್ದಾರೆ ಆದರೆ ಆದದ್ದೇ ಬೇರೆ. ಅದಕ್ಕಾಗಿ ಅವರು ತಮ್ಮ ಮಗಳನ್ನು ಮರೆಯುತ್ತಾರೆ. ಸರೋಜಿನಿ ಹುಟ್ಟಿದ ಮನೆಗೂ ಮಗಳಾಗಲಿಲ್ಲ, ಸಾಕಿದ ಮನೆ ಅವಳದಾಗಿರಲಿಲ್ಲ ನಡುವೆ ಗೊಂದಲದಲ್ಲಿ ಸಿಲುಕಿ ತನ್ನ ಬದುಕಿನ ವಿಪರ್ಯಾಸವನ್ನು ನೆನೆದು ದುಃಖಿಸುವಂತೆ ಕತೆಯೂ ನಿರೂಪಿತಗೊಂಡಿದೆ.

ನಿರೂಪಕರು ಒಂದು ಪಾತ್ರದ ಸುತ್ತಲೂ ಎರಡು ಸಂಸಾರದ ಸದಸ್ಯರ ಭಿನ್ನ-ಭಿನ್ನವಾದ ಮನಃಸ್ಥಿತಿ ಮನೋಧೋರಣೆಯನ್ನು ನಿರೂಪಿಸುವರು. ಸರೋಜಿನಿಗೆ ಎರಡು ಕುಟುಂಬವಿದ್ದರು ಸಹ ಅತಂತ್ರಳಾಗಿ ಮಾಧವನ ಪ್ರೀತಿಯನ್ನು ಬಯಸುತ್ತಾಳೆ. ಸುಬ್ಬಣ್ಣನ ಕೈಯಲಿದ್ದ ಕಾಗದವನ್ನು ನೋಡಿ ಆಕೆಗೆ ನೆನಪು ಮರುಕಳಿಸಿತು. ಎಲ್ಲಿಂದ ಕಾಗದ ಬಂದಿದ್ದೆಂಬುದನ್ನು ಖಾತ್ರಿಮಾಡಿಕೊಂಡಳು. ಸುಬ್ಬಣ್ಣನ ಮನಸ್ಸು ಚೆಂಚಲವಾಗಿ ಮಧ್ಯಾಹ್ನದ ಬಿಸಿಲನ್ನು ಲೆಕ್ಕಿಸದೆ ಹೊರಗೆ ಹೋಗಿದ್ದನು ಭಾಗ್ಯಮ್ಮ ನೆನೆದು ಹಣ್ಣಾದಳು. ಪರರ ಜೊತೆ ಮಗಳು ಸರೋಜಿನಿಯನ್ನು ಕಳಿಸುವಾಗ ತಾಯಿ ದುಃಖಿಸುವಳು. 'ಅಳೋದಿಲ್ಲಾಂತ ನನಗೆ ಮಾತು ಕೊಟ್ಟಿದ್ದೆ.....ಸುಬ್ಬಣ್ಣ ಆಕೆಯ ಮಾತನ್ನು ಜ್ಞಾಪಿಸಿದನು'.[1] ಸುಬ್ಬಣ್ಣನ ಮೇಲೆ ಆಣೆಯಿಟ್ಟು ತಾನು ಅಳೋದಿಲ್ಲವೆಂಬ ಮಾತನ್ನು ನೆನಪಿಸಿಕೊಂಡು ಭಾಗ್ಯಮ್ಮ ಸುಮ್ಮನಾದಳು. ಮಗಳನ್ನು ಒಪ್ಪಿಸಿ ನಾಗಮ್ಮ ಮತ್ತು ರಾಮಸ್ವಾಮಯ್ಯನವರೊಂದಿಗೆ ಕಳಿಸಲು ಚೂರುಬೆಲ್ಲದ ಲಂಚಕೊಟ್ಟು ಕಳಿಸುವ ಬಡತನವನ್ನು ನೆನದು ಅಳು ಬಂದರೂ ಸಹಿಸಿಕೊಂಡನು.

ಸುಬ್ಬಣ್ಣ ಮಗಳನ್ನು ಅನ್ಯರೊಂದಿಗೆ ಕಳಿಸಬಾರದಾಗಿತ್ತು. ಎಷ್ಟೇ ಬಡತನವಿದ್ದರೂ ತಾಯ್ತಂದೆಯರ ಪ್ರೀತಿಯನ್ನು ಶ್ರೀಮಂತಿಕೆ ಕೊಡಬಲ್ಲದೇ? ಮಗಳಿಗಿಂತ ಹಣವೇ ಮುಖ್ಯ ವಾಯಿತೇ? ಮಕ್ಕಳನ್ನು ಸಾಕುವ ಜವಾಬ್ದಾರಿಯಲ್ಲಿದ ಹೊರಬರಬೇಕೆನ್ನುವ ಆಲೋಚನೆ ಸರೋಜಿನಿಯ ಮೇಲೆ ಎಂತಹ ಪರಿಣಾಮ ಬೀರುತ್ತದೆಂಬುದನ್ನು ಸುಬ್ಬಣ್ಣ ಏಕೆ ಆಲೋಚಿಸಲಿಲ್ಲ? ಆದರೂ ಸರೋಜಿನಿಯ ಜೀವನ ಬೇರೆ ರೀತಿಯಾಯಿತು. ತಂದೆಯ ಮನೆಯಲ್ಲಿ ಸ್ವತಂತ್ರ್ಯಳಾಗಿದ್ದ ಅವಳು ಸಾಕಿದ ಮನೆಯಲ್ಲಿ ಪಂಜರದ ಗಿಳಿಯಂತೆ ವಾಸಿಸುವ ಅನಿವಾರ್ಯತೆಗೆ ಒಳಗಾದಳು. ತಾನು ಹುಟ್ಟಿದ ಮನೆಯಿಂದ ದೂರ ಹೋಗುತ್ತಿದ್ದಕ್ಕಾಗಿ ಅಳುತ್ತಿದ್ದಳು. 'ಎಳೆನೀರು ಸಿಕ್ಕುವುದೆಂದು ಕೊಂಚ ಸಮಧಾನವಾಯಿತು. ಆದರೂ ಅವಳು ತನ್ನ ತಾಯಿಯನ್ನೂ, ಅಕ್ಕಂದಿರನ್ನೂ ನೆನಸಿಕೊಂಡು ಬಿಕ್ಕುತ್ತಲೇ ಇದ್ದಳು.'[2] ಜೇನುಗೂಡಿನಂತಿರುವ ಕೂಡುಕುಟುಂಬದಿಂದ ಆಗಲಿದಕ್ಕೆ ನೋವಾದರೂ ಬರುಬರುತ್ತಾ ಹೆತ್ತವರ ಹಾಗೂ ಅಕ್ಕತಂಗಿಯರ ಮೇಲೆ ವೈಷಮ್ಯ ಹುಟ್ಟಿ ಮಾಧವನಿಗೆ ಹತ್ತಿರವಾದಳು. 'ನಾಗಮ್ಮನವರು ಸರೋಜಿಯನ್ನು ತಾವಾಗಿಯೇ ಕರೆದು ತೊಡೆಯ ಮೇಲೆ ಮಲಗಿಸಿಕೊಂಡಾಗ ಅವಳಿಗೆ ತಾಯಿಯ ನೆನಪು ಬಂದಿತು.'[3] ನಾಗಮ್ಮನವರು ತೋರಿಸುವ ಪ್ರೀತಿಯನ್ನು ಸರೋಜಿನಿ ಅರ್ಥಮಾಡಿಕೊಳ್ಳಲಿಲ್ಲ.

'ಸರೋಜಿನಿ ತನ್ನ ಮನಸ್ಸಿನಲ್ಲಿ ನರಸೀಪುರದ ಮಣ್ಣಿನ, ನಾಡಹಂಚಿನ, ದೀಪವಿಲ್ಲದ ಮನೆಯನ್ನು ನೆನೆಯುತ್ತಿದ್ದಾಳೆಂದು ಅವರಿಗೆ ಭಾಸವಾಯಿತು. ಅವಳ ನೆನಪನ್ನು ಕದಡಲೆಂದೇ ನಾಗಮ್ಮ ಉದ್ದೇಶಪೂರ್ವಕವಾಗಿ ಊಟ ಮಾಡುವಿಯಂತೆ

[1] ತ್ರಿವೇಣಿ. (2019). ಅವಳ ಮನೆ. ಭಾರತಿ ಪ್ರಕಾಶನ. ಪು.ಸಂ. 33

[2] ಅದೇ ಪು.ಸಂ. 60

[3] ಅದೇ ಪು.ಸಂ. 63

ಬಾ.'[4] ಎಂದು ಕರೆದಳು. ತನಗಿದ್ದ ಭೋಗದ ಜೀವನ ತನ್ನ ತಮ್ಮನಿಗೆ ಇಲ್ಲವೆಂದು ಸರೋಜಿನಿ ಮನಸ್ಸನ್ನು ಸಣ್ಣದಾಗಿಸಿಕೊಂಡಳು. ಮಾಧವನ ಬೀರುವಿನಲ್ಲಿ ರಾಮಸ್ವಾಮಯ್ಯನವರು ಇಟ್ಟ ಪುಸ್ತಕಗಳನ್ನು ಸರೋಜಿನಿ ಬಂದ ಮೇಲೆ ಈ ಬೀರುವಿನ ಬಾಗಿಲನ್ನು ತೆಗೆದ ನೆನಪಿಲ್ಲ ಎಂದು ಹೇಳುತ್ತಾಳೆ. ಮಾಧವ ನಾಲ್ಕು ವರ್ಷಗಳ ನಂತರ ನೀನು ಕಾಲೇಜಿಗೆ ಹೋಗಿ ಆ ಪುಸ್ತಕಗಳನ್ನು ಓದು ನನ್ನ ಮಾತು ನೆನಪಿನಲ್ಲಿಟ್ಟುಕೊಂಡಿರು ಎಂದನು. ಸರೋಜಿನಿ ಎರಡು ವರ್ಷದ ನಂತರ ತವರು ಮನೆಗೆ ಹೋದಾಗ ತಾಯಿ ಭಾಗ್ಯಮ್ಮ ನಿಂದಿಸಿ ಮಾತಾನಾಡುತ್ತಾಳೆ. ಈಗ ಬಡವರ ನೆನಪಾಯಿತ ಎಂದು ಮೂದಲಿಸುವಳು. ಸರೋಜಿನಿ ಏನು ಹೇಳದೆ ಪೆಚ್ಚಾಗಿ ನಕ್ಕಳು.

ಅವಳು ಸಂಗೀತ ಕಲಿಯಬೇಕೆಂಬ ಆಸೆಯಿಂದ ಮಾಧವನನ್ನು ನೆನಪಿಸಿಕೊಂಡಳು. ಸರಸ್ವತಿ ಪೂಜೆ ಮಾಡಿ ತಾನು ವೀಣೆ ಕಲಿಯುವ ಸಂದರ್ಭದಲ್ಲಿ ನಾಗಮ್ಮಳ ಎದುರಿಗೆ ತನ್ನ ಮನಸ್ಸಿನ ಮನೋಭಾವವನ್ನು ಹೊರಹಾಕಿದಳು. ಆಕೆಗೆ ಮಾಧವನ ನೆನಪು ಇಲ್ಲ. ಆತ ಹೊರಟು ಹೋದ ನಂತರ ಸರೋಜಿನಿ ಇನ್ನಿಬ್ಬರ ಶಿಷ್ಯೆಯಾಗಿದ್ದಳು. ಅವನ ಹೆಸರು ಕೇಳಿ ತಟ್ಟನೆ ನೆನಪು ಮಾಡಿಕೊಂಡಳು. ಸರೋಜಿನಿ ವಯಸ್ಸಿಗೆ ಬಂದಿದ್ದರಿಂದಾಗಿ ತನ್ನ ಸುತ್ತಲು ನಡೆಯುವ ವಿಚಾರಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೊಂದಿದ್ದಳು. ತಾನು ಹಣ ಕೇಳಿದರೆ ಮಾವ ಅತ್ತೆಯೊಂದಿಗೆ ವಾದಮಾಡುವ ಸಂದರ್ಭವನ್ನು ನೆನೆದು ಮೌನವಾಗಿರುತ್ತಿದ್ದಳು. ಯಾವುದನ್ನು ಕೇಳುವ ಮೊದಲು ಮಾವನ ಮನೋಭಾವವನ್ನು ನೆನಪಿಸಿಕೊಂಡು ಸುಮ್ಮನಾಗುವಳು.

ಅವಳು ಒಂದು ದಿನ ಕಾಲೇಜಿನಲ್ಲಿ ಮಾಧವನನ್ನು ನೋಡಿ ಹಿಂದೆ ಆತನನ್ನು ನೋಡಿದ ಸಂಗತಿಯನ್ನು ನೆನೆದಳು. ಅವಳು ಚಿಕ್ಕವಳಾಗಿದ್ದಾಗ ಪಾಠವನ್ನು ಹೇಳಿಕೊಟ್ಟಿದ್ದರು. ಸರೋಜಿನಿಯ ಮಾತುಗಳಿಂದ ಮಾಧವ ತಪ್ಪಿಸಿಕೊಳ್ಳಲು ಆಗಲಿಲ್ಲ. ವೀಣೆ ಬಾರಿಸುತ್ತಾ ಸರೋಜಿನಿ ಯಾರೆಂದು ನೆನಪಿಸಿಕೊಳ್ಳುತ್ತಾ 'ಕ್ಷಮಿಸು ಸರೋಜಾ ನಿನ್ನ ಗುರುತು ಸಿಕ್ಕಲಿಲ್ಲ. ಈಗ ತುಂಬಾ ಬೆಳೆದುಬಿಟ್ಟಿದೀಯಾ ನೀನಾದರೂ ನನಗೆ ಜ್ಞಾಪಿಸಬಾರದಾಗಿತ್ತೇ?'[5] ಎಂದನು. ತಂಗಿಯ ಮದುವೆಗೆ ಆಮಂತ್ರಣ ಕೊಡಲು ಬಂದ ಹೆತ್ತ ತಾಯಿ ಸರೋಜಿನಿಯನ್ನು ಮೊದಲಿಸಿ ಮಾತಾಡಿದಳು. ನೀನು ಮನಸ್ಸು ಮಾಡಿದರೆ ಸುಖವಾಗಿರಬಹುದಿತ್ತು. ನಾವು ಅಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿದ್ದರೂ ನೀನು ಮಾತ್ರ ಸುಖವಾಗಿದೀಯ ಎಂದಳು. ಸರೋಜಿನಿ ಅಸಹಾಯಕಳಾಗಿದ್ದಳು. ತನ್ನ ಮಾನಸಿಕ ಸ್ಥಿತಿಯನ್ನು ಅರ್ಥಮಾಡಿಕೊಳ್ಳದ ತಾಯಿಯ ವರ್ತನೆಯನ್ನು ನೆನೆದು ದುಃಖಿಸಿದಳು.

ಒಟ್ಟಾರೆಯಾಗಿ ನಿರೂಪಕರು ಒಂದು ಹೆಣ್ಣಿನ ಮನಸ್ಸಿನ ಸೂಕ್ಷ್ಮತೆಯನ್ನು ಹೆತ್ತವರು ಅರಿಯದಿದ್ದಾಗ ಅವಳು ಮನೋಧೋರಣೆ ಹೇಗಿರುತ್ತದೆಂಬುದನ್ನು ನಿರೂಪಿಸಿದ್ದಾರೆ. ಸರೋಜಿನಿ ಪಾತ್ರದ ಮೂಲಕ ಸ್ತ್ರೀಯರು ಅನುಭವಿಸುವ ಸಂಕಷ್ಟದ ಸೂಕ್ಷ್ಮತೆಯನ್ನು ಅನಾವರಣಗೊಳಿಸಿದ್ದಾರೆ. ಅತ್ತೆಯ ಮಾತಿನಲ್ಲಿ ಔದಾರ್ಯವಿದೆ, ಪ್ರೀತಿಯಿದೆ. ಮಾಧವನ ನೆನಪು ಅವಳ ಹೃದಯವನ್ನು ಆಕ್ರಮಿಸಿತು. ಒಂದು ಸಂಬಂಧದ ಕೊಂಡಿಯು ಕಳಚಿ ಹೊಸ ಸಂಬಂಧದ ಬೆಸುಗೆಯನ್ನು ತವಕಿಸುವ ಸರೋಜಿನಿಯ ಮನೋಧೋರಣೆಯು ಕಾದಂಬರಿಯಲ್ಲಿ ವ್ಯಕ್ತವಾಗಿದೆ.

**ಆಕರ ಗ್ರಂಥ**


- ತ್ರಿವೇಣಿ. (2019). *ಅವಳ ಮನೆ.* ಭಾರತಿ ಪ್ರಕಾಶನ.


[4] ಅದೇ ಪು.ಸಂ. 66

[5] ಅದೇ ಪು.ಸಂ.128

**ಪರಾಮರ್ಶನ ಗ್ರಂಥಗಳು**


- ಬಸವಣ್ಣ, ಎಂ. *ಸೈಕಲಾಜಿಕಲ್ ಕಾಂಪ್ಲೆಕ್ಸ್‌ಗಳು.* ಅಭಿನವ ಪ್ರಕಾಶನ
- ಗಿರಿ. (1999). *ಗತಿಸ್ಥಿತಿ.* ಅಂಕಿತ ಪುಸ್ತಕ ಪ್ರಕಾಶನ
- ನಾಯಕ, ಈ.ಎ. (2006). *ಕೃತಿಸಾಕ್ಷಿ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ನಾಗಭೂಷಣಸ್ವಾಮಿ, ಓ.ಎಲ್. (2021). *ಪ್ರಜ್ಞಾ ಪ್ರವಾಹ ತಂತ್ರ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ರಂಗನಾಥರಾವ್, ಈ.ಎನ್. *ಕನ್ನಡದ ಮೊದಲ ಕಾದಂಬರಿಗಳು.* ವಸಂತ ಪ್ರಕಾಶನ.
- ಶಶಿಕಲಾ, ಎಚ್. (2021). *ಕನ್ನಡ ಕಾದಂಬರಿ ಲೋಕ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸುಮಿತ್ರಾಬಾಯಿ, ಬಿ.ಎನ್. (2018). *ಸ್ತ್ರೀವಾದ (ಒಂದು ಅವಲೋಕನ).* ಅಹರ್ನಿಶಿ ಪ್ರಕಾಶನ.